ವಾದವನ್ನು ಮಂಡಿಸಿ ಗೆಲ್ಲಲು ಸಾಧ್ಯವಾಗದಿದ್ದರೂ, ಒಟ್ಟಾರೆ ಚುನಾವಣೆಯಲ್ಲಿ ಇಂತಿಷ್ಟು ಸ್ಥಾನಗಳು ದಲಿತರಿಗೇ ಮೀಸಲಾಗಿದ್ದು, ಸವರ್ಣೀಯರಿಗೆ ನಾಮಪತ್ರ ಸಲ್ಲಿಸುವ ಅನುಮತಿಯಿರಲಿಲ್ಲ. ಹೀಗಾಗಿ, ಓಟು ಯಾರೇ ಚಲಾಯಿಸಿದರೂ, ಮೀಸಲು ಕ್ಷೇತ್ರಗಳಲ್ಲಿ ದಲಿತರ ಪ್ರಾತಿನಿಧ್ಯ ಖಂಡಿತವಾಗಿಯೂ ಇರುತ್ತಿತ್ತು. ಆದರೆ, ಮುಸ್ಲಿಮರ ವಿಷಯಕ್ಕೆ ಬಂದಾಗ ಪ್ರತ್ಯೇಕ ಕ್ಷೇತ್ರಗಳೂ ಆಗಲಿಲ್ಲ, ಮೀಸಲಾತಿಯ ಲಾಭವೂ ದಕ್ಕಲಿಲ್ಲ. ಕಾಲಾಂತರದಲ್ಲಿ ಮುಸ್ಲಿಮರ ಪ್ರಾತಿನಿಧ್ಯ ರಾಜಕೀಯದಲ್ಲಿ ಕಡಿಮೆಯಾಗುತ್ತಾ ಬಂದಿರುವುದನ್ನು ಅನಿಲ್ ಗಮನಿಸುತ್ತಾರೆ. ದಲಿತರ ಪ್ರಾತಿನಿಧ್ಯಕ್ಕೆ ಅಂಬೇಡ್ಕರ್ ಹೋರಾಡಿದ ಹಾಗೆ ಮುಸ್ಲಿಮರ ಪ್ರಾತಿನಿಧ್ಯಕ್ಕೆ ರಾಷ್ಟ್ರವಾದಿ ಮತ್ತು ಆಧುನಿಕ ಮುಸ್ಲಿಮರು ಹೋರಾಡಲಿಲ್ಲ. ಈ ಎರಡು ವರ್ಗಗಳವರೇ ಮುಸ್ಲಿಮರನ್ನು ಪ್ರತಿನಿಧಿಸುತ್ತಾ ಬಂದಿದ್ದಾರೆ. ಈ ವರ್ಗದವರು, ಮುಖ್ಯಧಾರೆಯ ರಾಜಕೀಯ ಪಕ್ಷಗಳ ಕೃಪೆಯ ಮೇಲೆಯೇ ಅವಲಂಬಿತವಾಗಿದ್ದಾರೆಯೇ ಹೊರತು, ತಾವಾಗಿಯೇ ಗಟ್ಟಿಯಾಗಿ ಒಂದು ವಿಶಿಷ್ಟ ಗುರುತನ್ನು ಬೆಳೆಸಿಕೊಂಡಿಲ್ಲ. ದಲಿತರದ್ದೂ ಇದೇ ಸಮಸ್ಯೆಯಾದರೂ, ಕನಿಷ್ಠ ಪಕ್ಷ ಮೀಸಲು ಕ್ಷೇತ್ರಗಳಿಂದಾದರೂ ಅವರ ಆಯ್ಕೆಯಾಗಿ ಅವರ ದನಿಗಳು ಕೇಳುತ್ತವೆ. ಅಲ್ಲೂ ಮುಖ್ಯಧಾರೆಯ ಕೃಪೆಯಿಂದಲೇ ದಲಿತರು ಗೆಲ್ಲುತ್ತಿದ್ದಾರೆನ್ನುವುದಕ್ಕೆ ಅಂಬೇಡ್ಕರ್ ತಮ್ಮ ಚುನಾವಣೆಯನ್ನು ಸೋತ ವಾಸ್ತವ ನಮ್ಮೆದುರಿಗಿದೆ.

ಅನಿಲ್ ಎತ್ತುವ ಮತ್ತೊಂದು ಪ್ರಶ್ನೆ ಕೇವಲ ಮುಸಲ್ಮಾನರಿಗೆ ಸಂಬಂಧಿಸಿದ್ದು. ಅದು ಭಾಷೆಯ ಪ್ರಶ್ನೆ. ದೇಶದ ಹಲವು ಭಾಗಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದ್ದ ಉರ್ದು ಭಾಷೆ, ಭಾಷಾವಾರು ರಾಜ್ಯಗಳ ವಿಂಗಡಣೆಯಲ್ಲಿ ತೀವ್ರ ಉಪೇಕ್ಷೆಗೆ ಒಳಗಾಯಿತು. ಯಾವೊಂದೂ ರಾಜ್ಯದ ಪ್ರಮುಖ ಭಾಷೆಯಾಗಿ ಅದು ಉಳಿಯಲಿಲ್ಲ. ಉರ್ದು ಭಾಷೆಯನ್ನು ಬದಿಗೊತ್ತಿ, ಅದಕ್ಕೆ ಸಮೀಪವಾಗಿದ್ದ ಹಿಂದಿ ಮತ್ತು ಹಿಂದುಸ್ತಾನಿಯನ್ನು ಪ್ರೋತ್ಸಾಹಿಸಿದ್ದಲ್ಲದೆ, ಲಿಪಿಗೂ ದೇವನಾಗರಿಯನ್ನೇ ಬಳಸುವತ್ತ ನಮ್ಮ ರಾಷ್ಟ್ರೀಯ ನಾಯಕರು ವಾಲಿದ್ದರಿಂದ ಉರ್ದು ಒಂದೇ ಧರ್ಮದ, ಜನಾಂಗದ ಭಾಷೆಯಾಗಿ ಉಳಿದುಹೋಯಿತು. ಉರ್ದು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಕೇಂದ್ರಗಳಾಗಿದ್ದ ಲಖನೌ ಮತ್ತು ಹೈದರಾಬಾದುಗಳಲ್ಲಿ ಆ ಭಾಷೆ ದ್ವಿತೀಯ ದರ್ಜೆಗೆ ಇಳಿಯಿತು. ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರು ಈ ಭಾಷೆಯನ್ನು ಬಳಸುತ್ತಿದ್ದುದರಿಂದ ಉರ್ದು ಭಾಷೆ ಒಂದು ಕೋಮಿನ ಭಾಷೆಯಾಗಿ ಉಳಿದುಹೋಯಿತು. ಇದರಿಂದಾಗಿಯೂ ದೇಶದ ಮುಸಲ್ಮಾನರು ಮುಖ್ಯಧಾರೆಯಿಂದ ದೂರದಲ್ಲಿಯೇ ಉಳಿಯುವ ಅನಿವಾರ್ಯತೆ ಉಂಟಾಯಿತು.

ಸಂವಿಧಾನ ರಚನೆಯ ಸಮಯದಲ್ಲಿ ಅಲ್ಪಸಂಖ್ಯಾತರ ವಿಷಯಕ್ಕೆ ಈ ಕಲಮನ್ನು ಮೊದಲಿಗೆ ಸೂಚಿಸಲಾಗಿತ್ತು: “ಎಲ್ಲ ಅಲ್ಪಸಂಖ್ಯಾತರಿಗೂ ತಮ್ಮ ಭಾಷೆ, ಲಿಪಿ, ಸಂಸ್ಕೃತಿಯ ವಿಷಯದಲ್ಲಿ ಸಂರಕ್ಷಣೆ ಕೊಡಲಾಗುತ್ತದೆ. ಈ ವಿಷಯಗಳ ಹಿತಾಸಕ್ತಿಗಳ ವಿರುದ್ಧವಾಗಿ ಹಕ್ಕುಗಳಿಗೆ ಧಕ್ಕೆಯುಂಟಾಗುವ ಯಾವುದೇ ಕಾನೂನು ಕಾಯಿದೆಗಳನ್ನು ಜಾರಿ ಮಾಡಲಾಗುವುದಿಲ್ಲ” ಎನ್ನುವ ವಾಕ್ಯಕ್ಕೆ ಬದಲಾಗಿ, “ಯಾವುದೇ ವರ್ಗದ ಜನತೆ ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಹಕ್ಕನ್ನು ಪಡೆದಿರುತ್ತಾರೆ” ಎಂದು ರೂಪಿಸಲಾಯಿತು. ಈ ಬದಲಾವಣೆಯೇ ಮುಸ್ಲಿಮರ ಗತಿ–ಸ್ಥಿತಿಯನ್ನು ಭವ್ಯವಾಗಿ ಸೂಚಿಸುತ್ತದೆ. ಮುಸ್ಲಿಂ ಲೀಗ್‌ನ ಜೆಡ್.ಎಚ್. ಲಾರಿ ತಮ್ಮ ಮಗನ ಶಾಲೆಯಲ್ಲಿ ಆದ ಅನುಭವನ್ನು ಹಂಚಿಕೊಳ್ಳುತ್ತಾರೆ – “ಈ ದಿನ ನಮ್ಮ ಮೇಷ್ಟ್ರು ಗಣಿತದ ಲೆಕ್ಕಾಚಾರವನ್ನು ಹಿಂದಿಯಲ್ಲಿ ಮಾಡಲು ಹೇಳಿದ್ದಲ್ಲದೇ ಮಾರನೆಯ ದಿನದಿಂದ ಉರ್ದು ಪುಸ್ತಕವನ್ನು ತರಕೂಡದೆಂದು ತಾಕೀತು ಮಾಡಿದರು”. ಈ ವಿಷಯದ ಚರ್ಚೆಯಲ್ಲಿ ಉರ್ದುವಿನ ಬೆಂಬಲಕ್ಕೆ ಬಂದ ಬೇರೊಬ್ಬ ಸದಸ್ಯರನ್ನು ಕೆಲವರು, ಆ ಭಾಷೆಯೇ ಬೇಕಿದ್ದರೆ ಪಾಕಿಸ್ತಾನಕ್ಕೆ ಹೋಗಿ ಅಂತ ಹೇಳಿದರಂತೆ. ಹೀಗೆ ಅಲ್ಪಸಂಖ್ಯಾತ ಮುಸ್ಲಿಮರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಮಾತಾಡಿದ ಕೂಡಲೇ ಪಾಕಿಸ್ತಾನಕ್ಕೆ ಕಳಿಸಬೇಕೆನ್ನುವ ಮಾತು 1948ರಲ್ಲಿಯೇ ಇತ್ತು!

ಭಾಷೆಯನ್ನು ಒಂದು ಧರ್ಮದೊಂದಿಗೆ ಬೆರೆಸುವುದರಿಂದ ಈ ವಿಷಯ ಇನ್ನಷ್ಟು ಜಟಿಲವಾಯಿತು. ಗಡಿಪ್ರಾಂತಗಳಲ್ಲಿದ್ದ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು (ಕಾಸರಗೋಡಿನಲ್ಲಿ ಕನ್ನಡ ಮತ್ತು ಒಡಿಶಾದ ಗಡಿಯಲ್ಲಿ